**ಕರ್ನಾಟಕ ಸರ್ಕಾರ**

**ಲೋಕೋಪಯೋಗಿ ಇಲಾಖೆ,**
**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿಶೇಷ ವಿಭಾಗ, ನಜರ್‌ಬಾದ್, ಮೈಸೂರು.**
E-mail:eepwdspecialmysuru@gmail.com Phone No. & Fax No. 0821 2492297

**ನಂ.ಕಾಇಂ:ಲೋಇ:ವಿವಿ:ಮೈ:ತಾಂತ್ರಿಕ:ಸ.ಇಂ–2:ಕಟ್ಟಡ ಸುರಕ್ಷತೆ:2024–25** 3377-78 29/3/25 **ದಿನಾಂಕ:**

**ರವರಿಗೆ**

ಕಾರ್ಯದರ್ಶಿಗಳು,
ಶ್ರೀ ಶಾರದ ಪಬ್ಲಿಕ್ ಶಾಲೆ,
ಆರ್.ಟಿ.ನಗರ,
ಮೈಸೂರು.

**ಮಾನ್ಯರೇ,**

**ವಿಷಯ:** ಮೈಸೂರು ನಗರದ ಆರ್.ಟಿ.ನಗರದಲ್ಲಿರುವ ಶ್ರೀ ಶಾರದ ಪಬ್ಲಿಕ್ ಶಾಲಾ ಕಟ್ಟಡಕ್ಕೆ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅಪರ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ:ಲೋಇ:59:ಬಿಇಡಿ:2019 ದಿನಾಂಕ: 06.05.2022
2. ಸರ್ಕಾರದ ಅಧೀನ ಕಾರ್ಯದರ್ಶಿ, ಪ್ರಾಥಮಿಕ ಶಿಕ್ಷಣ ಇಲಾಖೆರವರ ಸುತ್ತೋಲೆ ಸಂಖ್ಯೆ: ಇಡಿ:43:ಪಿಜಿಸಿ:2022 ದಿನಾಂಕ: 18.05.2022
3. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರು ಇವರ ಕಛೇರಿ ಪತ್ರ ಸಂಖ್ಯೆ: 1091 ದಿನಾಂಕ: 20.03.2025

***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಯದರ್ಶಿಗಳು, ಆರ್.ಟಿ.ನಗರದಲ್ಲಿರುವ ಶ್ರೀ ಶಾರದ ಪಬ್ಲಿಕ್ ಶಾಲೆ, ಮೈಸೂರುರವರ ಕೋರಿಕೆಯಂತೆ ಮೈಸೂರು ನಗರದ ಆರ್.ಟಿ.ನಗರದಲ್ಲಿರುವ ಶ್ರೀ ಶಾರದ ಪಬ್ಲಿಕ್ ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲು ಕೋರಿರುವ ಅನ್ವಯ ನಿಗಧಿತ ನಮೂನೆಯಲ್ಲಿ ಉಲ್ಲೇಖ ಪತ್ರ(3)ರಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರುರವರು ವರದಿ ಸಲ್ಲಿಸಿರುತ್ತಾರೆ.

ಮೈಸೂರಿನ ಆರ್.ಟಿ.ನಗರದಲ್ಲಿರುವ ಶ್ರೀ ಶಾರದ ಪಬ್ಲಿಕ್ ಶಾಲಾ ಕಟ್ಟಡವನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರು ರವರು ದಿನಾಂಕ:18.03.2025 ರಂದು ಪರಿವೀಕ್ಷಿಸಲಾಗಿದ್ದು, ಕಟ್ಟಡವು ನೆಲ + 2 ಅಂತಸ್ತಿನ ಕಟ್ಟಡವಾಗಿದ್ದು, ಎರಡು ಕಡೆ ಮೆಟ್ಟಿಲುಗಳ ವ್ಯವಸ್ಥೆ ಇರುತ್ತದೆ. ಕಟ್ಟಡದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಎಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರುರವರು ತಿಳಿಸಿರುತ್ತಾರೆ.

ಮುಂದುವರೆದು ಸದರಿ ಕಟ್ಟಡದ NDT ಪರೀಕ್ಷೆ (Ultrasonic pulse Velocity Test & Rebound hammer Test) ಪ್ರಮಾಣ ಪತ್ರವನ್ನು ಉಲ್ಲೇಖ(3)ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪ–ವಿಭಾಗ ಮೈಸೂರುರವರು ಲಗತ್ತಿಸಿರುತ್ತಾರೆ. Fire Safety Recommendation Certificate ಅನ್ನು ದಿನಾಂಕ: 10.02.2025 ರಂದು ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳು ನೀಡಲಾಗಿರುತ್ತದೆ.

ಮು.ತಿ.ನೋ

ಕಾರ್ಯದರ್ಶಿಗಳು, ಆರ್.ಟಿ.ನಗರದಲ್ಲಿರುವ ಶ್ರೀ ಶಾರದ ಪಬ್ಲಿಕ್ ಶಾಲೆ, ಮೈಸೂರುರವರು, ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ, ಪ್ರಾಥಮಿಕ ಶಿಕ್ಷಣ ಇಲಾಖೆರವರ ಸುತ್ತೋಲೆ ಸಂಖ್ಯೆ:ಇಡಿ:43:ಪಿಜಿಸಿ:2022 ದಿನಾಂಕ:18.05.2022 ಆದೇಶದಂತೆ ನಗರ ಪ್ರದೇಶದ ಶಾಲೆಗೆ ರೂ.5,000/- ಹಾಗೂ 18% ಜಿ ಎಸ್.ಟಿ ಶುಲ್ಕವನ್ನು ದಿನಾಂಕ:26.03.2025 ರಂದು ಯೂನಿಯನ್ ಬ್ಯಾಂಕ್, ಬೋಗಾದಿ ಶಾಖೆ, ಮೈಸೂರುರವರಿಂದ ಡಿ.ಡಿ.ಸಂಖ್ಯೆ:602934 ಹಾಗೂ 602935 ರಲ್ಲಿ ಲೆಕ್ಕಶಾಖೆಗೆ ಪಾವತಿಸಿರುತ್ತಾರೆ. ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ ಹಾಗೂ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರುರವರು ಪರಿಶೀಲಿಸಿ ನೀಡಿರುವ ವರದಿಯಂತೆ ಕಟ್ಟಡವು "Structurally Stable" ಇರುವುದಾಗಿ ಕಂಡು ಬಂದಿರುತ್ತದೆ. ಕಾಲಕಾಲಕ್ಕೆ ಅವಶ್ಯ ಕಟ್ಟಡದ ನಿರ್ವಹಣೆಯನ್ನು ಕೈಗೊಳ್ಳುವ ಹಾಗೂ ಅಗ್ನಿಶಾಮಕ ಇಲಾಖೆಯಿಂದ Fire Safety Compliance Certificate ಅನ್ನು ನವೀಕರಿಸುವ ಷರತ್ತುಗಳಿಗೆ ಒಳಪಟ್ಟಂತೆ ಸದರಿ ಕಟ್ಟಡಕ್ಕೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರುರವರು ತಿಳಿಸಿರುವಂತೆ 06 ವರ್ಷಗಳ ಕಾಲಾವಧಿಗೆ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

29/03/25

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ
6 ವಿಶೇಷ ವಿಭಾಗ, ಮೈಸೂರು.